ಓಎಸ್ 121/2011

**ಪಿ.ಡಬ್ಲ್ಯೂ: 02.**

ದಿನಾಂಕಃ 02.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ ಕೆ ಸಿ ಬಿ ವಕೀಲರಿಂದಃ**

ನಾನು ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ದಾವಾಸ್ತಿಯ ಸರ್ವೆ ನಂ.83/6. ನನಗೆ ದಾವಾಸ್ತಿಯ ಪೂರ್ವಕ್ಕೆ, ಪಶ್ಚಿಮ, ಉತ್ತರ ಮತ್ತು ದಕ್ಷಿಣಗಳಿಗೆ ಏನು ಬರುತ್ತದೆ ಎಂದು ಗೊತ್ತಿಲ್ಲ. ನಿಪಿ1 ರಲ್ಲಿ ನಮೂದಾಗಿರುವ ದಾವಾಸ್ತಿಯ ಪೂರ್ವಕ್ಕೆ, ಪಶ್ಚಿಮ, ಉತ್ತರ ಮತ್ತು ದಕ್ಷಿಣಗಳಿಗೆ ಏನು ಬರುತ್ತದೆ ಎಂದು ಗೊತ್ತಿಲ್ಲ. ನಿಪಿ1 ಕ್ಕೆ ಸಹಿ ಹಾಕುವ ಸಮಯದಲ್ಲಿ ದಾವಾಸ್ತಿ ರಾಜಶೇಖರ್ ರವರಿಗೆ ಸೇರಿರುತ್ತದೆ. ರಾಜಶೇಖರ್ ರವರು ದಾವಾಸ್ತಿಯನ್ನು ಯಾರಿಗೂ ಮಾರಿರುವುದಿಲ್ಲ. ನಿಪಿ1 ಕ್ಕೆ ಸಹಿ ಹಾಕುವ ಸಮಯದಲ್ಲಿ ನಾನು ದಾವಾಸ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿ ನೋಡಿರುವುದಿಲ್ಲ. ನಿಪಿ1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನಿಪಿ1 ಕ್ಕೆ ನಾನು ಮತ್ತು ರಾಜಪ್ಪ ಸಹಿ ಹಾಕಿರುತ್ತೇವೆ, ಇತರರು ಯಾರು ಸಹಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಮತ್ತು ರಾಜಪ್ಪ ಹೊರತುಪಡಿಸಿ ನಮ್ಮ ಮುಂದೆ ಯಾರು ಸಹಿ ಹಾಕಿರುವುದಿಲ್ಲ. ನನಗೆ 1 ನೇ ಪ್ರತಿವಾದಿ ಗೊತ್ತಿರುತ್ತಾರೆ. ಈ ದಾವೆ ಯಾರು ಯಾರ ನಡುವೆ ನಡೆಯುತ್ತಿದೆ ಎಂದು ಗೊತ್ತಿಲ್ಲ. ಭೋಗಾಚಾರಿಯವರಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿಗೆ ಭೋಗಾಚಾರಿಯ ಮಕ್ಕಳಾದ 1 ನೇ ನಂಜಾಚಾರಿ, 2 ನೇ ಕಾಳಾಚಾರಿ, 3 ನೇ ಶಿವಣ್ಣಾಚಾರಿ, ಮಹದೇವಾಚಾರಿ, ಗಣೇಶ, ರವಿ ಎನ್ನುವವರು ಸೇರಿ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿಯವರು ಸರ್ವೆ ನಂ.83/6 ವಿಸ್ತೀರ್ಣ 28 ಗುಂಟೆ ಜಮೀನನ್ನು ದಿಃ24.04.2010 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ಕ್ಕೆ ಕೆ ಬಿ ಸ್ವಾಮಣ್ಣರವರ ಜಮೀನು, ಉತ್ತರಕ್ಕೆ ಕೆ ಎಂ ಸಿದ್ದಪ್ಪರವರ ಜಮೀನು ಬರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಕೆ ಎಂ ಸಿದ್ದಪ್ಪರವರ ಜಮೀನು ಹಾಗೂ ಕಾಲುವೆ ಸಹ ಇರುತ್ತದೆ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ 28 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದ ನಂತರ ಅವರೇ ಸದರಿ ಜಮೀನಿನ ಸ್ವಾಧೀನದಲ್ಲಿರುತ್ತಾರೆ ಹಾಗೂ ಅವರ ಹೆಸರಿಗೆ ಖಾತೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಕೆ ಬಿ ಸ್ವಾಮಣ್ಣ ಎನ್ನುವವರು

**ಪಿ.**ಡಬ್ಲ್ಯೂ**: 02.**

ರಾಜಶೇಖರ್ (ವಾದಿ 1 ಡಿರವರ ತಂದೆ) ಎಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಹಾಗೂ ಸಹಿ ಹಾಕಲು ಬರುತ್ತದೆ. ಸಾಕ್ಷಿಗೆ ನಿಡಿ4 ಮತ್ತು 5 ನ್ನು ತೋರಿಸಲಾಗಿ ಸಾಕ್ಷಿ ಅದು ಸರಿ ಇದೆ ಎಂದು ಒಪ್ಪಿರುತ್ತಾರೆ. ನಿಡಿ2 ರ ಪ್ರಕಾರ 1 ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಬರುವ ಮುನ್ನ ನಂಜಾಚಾರಿ, ಕಾಳಾಚಾರಿ ಹಾಗೂ ಶಿವಣ್ಣಾಚಾರಿರವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿ. ಸಾಮಾನ್ಯವಾಗಿ ಯಾರು ಸ್ವಾಧೀನದಲ್ಲಿರುತ್ತಾರೋ ಅವರ ಹೆಸರಿನಲ್ಲಿಯೇ ಪಹಣಿ ಬರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದ ಕಾರಣ ಅವರ ಹೆಸರಿನಲ್ಲಿಯೇ ಪಹಣಿ ಬರುತ್ತದೆ ಎಂದರೆ ಸರಿ. ದಾವಾಸ್ತಿಯಲ್ಲಿ ದಾವಾ ಹೂಡುವ ಸಮಯದಿಂದಲೂ 1 ನೇ ಪ್ರತಿವಾದಿಯೇ ಸ್ವಾಧೀನದಲ್ಲಿರುತ್ತಾರೆ, ಎಂದಿಗೂ ಸಹ ಕೆ ಬಿ ಸ್ವಾಮಣ್ಣ ಹಾಗೂ ರಾಜಶೇಖರ್ ರವರು ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿ.

**ಮರುವಿಚಾರಣೆಃ**ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.